ಶ್ರೀ ವೀರೇಂದ್ರ ಪಾಟೀಲ್ :— ಶ್ರೀಮತಿ ನಾಗರತ್ನಮ್ಮನವರು ಸರ್ಕಾರವನ್ನು ಬೈಯ್ಯುವುದಕ್ಕೆ ಅವರಿಗೆ ಯಾವ ಅವಕಾಶ ಸಿಕ್ಕಿದರೂ ಅದನ್ನು ಬಿಡದಂತೆ ಉಪಯೋಗಿ ಮಾಡಿಕೊಳ್ಳುತ್ತಾರೆಂಬ ವಿಷಯ ನನಗೆ ಚೆನ್ನಾಗಿ ಗೊತ್ತಿದೆ. ಮೇಲಾಗಿ ಅವರಿಗೇಕೆ ಅಷ್ಟು ಸಿಟ್ಟಿದೆ ಎಂಬುದೂ ಕೂಡ ನನಗೆ ಗೊತ್ತಿದೆ. ಆದರೆ ನನಗೆ ಅಧ್ಯಕ್ಷರ ಮುಖಾಂತರ.....

ಶ್ರೀ ಎನ್. ಹುಚ್ಚಮಾಸ್ತಿಗೌಡ :— ಸ್ವಾಮಿ ನನ್ನದೊಂದು ಕ್ರಿಯಾಲೋಪ ಇದೆ ಈಗತಾನೆ ಮಾತನಾಡಿದ ಮಾನ್ಯ ಸದಸ್ಯರಾದ ಶ್ರೀಮತಿ ನಾಗರತ್ನಮ್ಮನವರು ಹೇಳಿದ್ದಾದರೂ ಏನು? ಅವರು ಕೇಳಿದ್ದು ಅವರು ಈ ಹಿಂದೆ ಏನು ಒಂದು ಆಪಾದನೆಯನ್ನು ಮಾಡಿ ಅದನ್ನು ತನಿಖೆ ಮಾಡಲು ಮುಖ್ಯ ಮಂತ್ರಿಗಳ ಕಡೆಗೆ ಒಂದು ಕಂಪ್ಲೇಂಟನ್ನು ಅಧ್ಯಕ್ಷರ ಮೂಲಕ ಕೊಟ್ಟಿದ್ದರು. ಈಗ ಆ ವಿಚಾರಣೆಯನ್ನು ಇನ್ನೂ ಪ್ರಾರಂಭಮಾಡಿಲ್ಲ. ಆದ್ದರಿಂದ ಅದನ್ನು ಆ ಆಪಾದನೆಗೆ ಒಳಗಾಗಿರತಕ್ಕ ಜನರು ಅದನ್ನು ಮುಚ್ಚಿ ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆಂದೂ ಅದಕ್ಕಾಗಿ ಕೂಡಲೇ ಈ ದಿನವೇ ಅವನ್ನು ತನಿಖೆ ಮಾಡಿಸ ಬೇಕೆಂದು ಕೇಳುತ್ತಿದ್ದರೆ. ಇಲ್ಲದಿದ್ದರೆ ಇವರು ಕೊಟ್ಟ ಅರ್ಜಿಯನ್ನು ನೀವು ಈ ದಿವಸ ವಿಚಾರಣೆ ಮಾಡಿದಿದ್ದರೆ ನಾಳೆ ನೀವು ಶುಳ್ಳರ್ಜಿ ಎಂದು ಹೇಳಬಹುದು. ಅದಕ್ಕೆ ಅವರು ನನ್ನನ್ನು ಯಾವಾಗ ಅವಕಾಶ ಸಿಕ್ಕದರೆ ಆಗ ಬೈಯ್ಯುತ್ತಾರೆ ಎಂದರೇನು ಅರ್ಥ ? ಆದ್ದರಿಂದ ಸರ್ಕಾರದವರು ಈ ದಿವಸವೇ ಅದನ್ನು ವಿಚಾರಣೆ ಮಾಡಿಸಿ ಅದರ ಫಲಿತಾಂಶವನ್ನು ಸಭೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ ;—ಅವರು ಹೇಳಿದ ವಿಚಾರ ನನಗೆ ಮನನವಾಗಿದೆ. ಅದನ್ನು ವಿಚಾರಣೆ ಮಾಡುವುದಕ್ಕೆ ತಿಳಿಸಿದ್ದೇನೆ. ಯಾವ ಒಂದು ರಸ್ತೆಯನ್ನೂ ಮಾತನೆ ಕಲ್ಪರ್ಟನ್ನೂ ಮಾಡದೆ ಹಣವನ್ನು ಡ್ರಾ ಮಾಡಿ ತಿಂದು ಹಾಕಿದ್ದಾರೆಂಬ ಒಂದು ಆಪಾದನೆಯೇನಿದೆ ಅದೇ ನಿಜವಾಗಿಯೂ ಬಹಳ ಸೀರಿಯಸ್ಸಾದ ಒಂದು ಆಫೆನ್ಸ್ ಎನ್ನುವುದರಲ್ಲಿ ಸಂದೇಹವೇ ಇಲ್ಲ. ನಾನು ಇದೇ ಸಭೆಯಲ್ಲಿ ಈ ಹಿಂದೆ ಎಷ್ಟೋಸಾರ್ತಿ ಹೇಳಿದ್ದೇನೆ-ನಮ್ಮ ಕ್ಯಾಬಿನೆಟ್ಟಿನಲ್ಲಿ ಕ್ರೀಮರ್ಸ್ ಆಗಿರತಕ್ಕ ಪ್ರಕಾರ ಇಂಥ ಕರಪ್ಷನ್ ಕೇಸುಗಳಲ್ಲಿ ಲೀಸ್ಟ್ ಪನಿಷ್‌ಮೆಂಟ್ ಎಂದರೆ ಡಿಸ್‌ಮಿಸಲ್. ಆದರೆ ಈ ದಿವಸ ಮಾನ್ಯ ಸದಸ್ಯರು ಇಲ್ಲಿ ಕಂಪ್ಲೇಂಟನ್ನು ಕೊಟ್ಟ ಮೇಲೆ ಅಲ್ಲಿ ಈಗ ಹೊಸದಾಗಿ ಕೆಲಸವನ್ನು ಪ್ರಾರಂಭಮಾಡಿದ್ದಾರೆಂದು ಹೇಳುತ್ತಿದ್ದಾರೆ. ನಾನು ಈ ಬಗ್ಗೆ ಕೂಡಲೆ ವಿಚಾರಣೆಗೆ ಏರ್ಪಾಡು ಮಾಡುತ್ತೇನೆ. ಅದರ ಫಲಿತಾಂಶವನ್ನು ಮುಂದಿನ ಅಧಿವೇಶನದಲ್ಲಿ ಸಭೆಗೆ ತಿಳಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ ;— ಮುಖ್ಯ ಮಂತ್ರಿಗಳು ಇಮ್ಮೀಡಿಯೆಟ್ಟಾಗಿ ಒಬ್ಬರನ್ನು ಕಳುಹಿಸಿ ಅಲ್ಲಿ ಕೆಲಸ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು ನೋಡಲಿ.....

ಶ್ರೀ ವೀರೇಂದ್ರ ಪಾಟೀಲ್ :— ನಾನೂ ಇದೇ ವಿಚಾರವನ್ನು ಹೇಳಿದೆ. ತಕ್ಷಣ ವಿಚಾರಣೆಗೆ ನೇಮಕ ಮಾಡುತ್ತೇನೆ ಮತ್ತು ಮುಂದಿನ ಅಧಿವೇಶನದಲ್ಲಿ ಇದಕ್ಕೆ ಉತ್ತರವನ್ನು ತಿಳಿಸುತ್ತೇನೆ.

Notice of Adjournment Motion.

re :—Congress Exhibition in Bangalore in view of the Statement made by the Chief Minister.

†ಶ್ರೀ ಎಸ್. ಶಿವಪ್ಪ :—ಅಧ್ಯಕ್ಷರೇ ನಾನು ಒಂದು ಅವಸರದ ನಿರ್ಣಯವನ್ನು ಇಲ್ಲಿ ಚರ್ಚೆಮಾಡತಕ್ಕ ಉದ್ದೇಶದಿಂದ ತಪ್ಪಗೆ ಕಳುಹಿಸಿದ್ದೆ. ಅದು ಬಹಳ ಪ್ರಾಮುಖ್ಯವಾದಂಥ ಹಾಗೂ ತ್ವರಿತವಾಗಿ ಚರ್ಚೆ ಮಾಡಬೇಕಾಂಥ? ವಿಷಯ ಅದು. ಅದು ಏನು ವಿಚಾರ ಎಂದರೆ ಕಾಂಗ್ರೆಸ್ ಪಕ್ಷದವರು ಅಂದರೆ ಈ ರಾಜ್ಯದಲ್ಲಿ ಆಡಳಿತವನ್ನು ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ಬೆಂಗಳೂರಿನಲ್ಲಿ ಒಂದು ವಸ್ತುಪ್ರದರ್ಶನವನ್ನು ನಡೆಸುವುದಕ್ಕಾಗಿ ತಮ್ಮ ಒಂದು ಪಕ್ಷದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವುದಕ್ಕೂ ಮತ್ತು ತಮ್ಮ ಪಾರ್ಟಿಯನ್ನು ಬಲಗೊಳಿಸುವುದಕ್ಕೂ ನೇರವಾಗಿ ಸರ್ಕಾರದಿಂದ ಹಣವನ್ನು ಖರ್ಚುಹಾಕಿ ಜೊತೆಗೆ ಸರ್ಕಾರಿ ಶಿಬ್ಬಂದಿಯನ್ನೂ ಕೂಡ ಒಳಿಸುತ್ತಿದ್ದಾರೆ, ಆ ವಸ್ತುಪ್ರದರ್ಶನದ ಸಂಪಾದನೆಯೆಲ್ಲ ಸರ್ಕಾರಕ್ಕೆ ಸೇರುವುದಾಗಿದ್ದಿದ್ದರೆ ನಾನು ಇದರ ತಂಟೆಗೂ ಬರುತ್ತಿರಲಿಲ್ಲ. ಆದರೆ ಆ ವಸ್ತುಪ್ರದರ್ಶನದ ಸಂಪಾದನೆ ಆ ಕಾಂಗ್ರೆಸ್ ಸಂಸ್ಥೆಗೆ ಸೇರುತ್ತಿದೆ. ಈ ದಿವಸ ಕಾಂಗ್ರೆಸ್ ಧ್ವಜದಡಿಯಲ್ಲಿ ರಾಜ್ಯ ಸರ್ಕಾರದ ಅಧಿಕಾರಿ

(ಶ್ರೀ ಎಸ್. ಶಿವಪ್ಪ)

ಗಳಿರುವುದು ಸರಿಯಾದ್ದಲ್ಲ. ಅಂದರೆ ಸರ್ಕಾರಕ್ಕೂ ಈ ದಿವಸ ಆಡಳಿತವನ್ನು ನಡೆಸುತ್ತಿರುವ ಸರ್ಕಾರಕ್ಕೂ ಯಾವ ವ್ಯತ್ಯಾಸವೂಇಲ್ಲ ಎರಡೂ ಒಂದೇ ಎಂಬ ಅಭಿಪ್ರಾಯ ಜನರಲ್ಲಿ ಮೂಡುವಂತೆ ಮಾಡಲು ಈ ಪ್ರದರ್ಶನ ಸಹಕಾರಿಯಾಗಿದೆ. ಈ ಪಾರ್ಟಿಯ ಕೆಲಸಕಾರ್ಯಗಳಿಗೆ ಇವರ ಸಂಪಾದನೆಗಾಗಿ ಮಾಡತಕ್ಕ ವಸ್ತುಪ್ರದರ್ಶನಕ್ಕೆ ಇವರ ಪಾರ್ಟಿಯನ್ನು ಬಲಗೊಳಿಸುವುದಕ್ಕೆ ಕೈಗೊಳ್ಳತಕ್ಕ ಕೆಲಸಕಾರ್ಯಗಳಿಗೆ ನೇರವಾಗಿ ಖಜಾನೆಯಿಂದ ಹಣವನ್ನು ಬಳಸುವುದು ಸರ್ವಥಾ ನ್ಯಾಯವಾದುದಲ್ಲ. ಕಳೆದ ೨ವರ್ಷಗಳಿಂದಲೂ ನಾವು ಇದು ಸರಿಯಲ್ಲ ಎಂದು ಹೇಳುತ್ತಿದ್ದಾಗ್ಗೂ ಸರ್ಕಾರದವರು ಆ ಬಗ್ಗೆ ವನಸ್ಸನ್ನು ಕೊಟ್ಟಿಲ್ಲ. ಇನ್ನು ಸರ್ಕಾರದಿಂದ ಈ ವಸ್ತುಪ್ರದರ್ಶನಕ್ಕಾಗಿ ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆ ಎಂಬ ಅಂಕಿ ಅಂಶಗಳನ್ನು ಈ ಸಭೆಗೆ ಒದಗಿಸುತ್ತಿಲ್ಲ. ಇಲ್ಲಿಯತನಕ ಇಂಥ ವಸ್ತುಪ್ರದರ್ಶನವನ್ನು ಈ ಬೆಂಗಳೂರು ಒಂದು ಕಡೆ ಮಾತ್ರ ನಡೆಸುತ್ತಿದ್ದರು. ಈಗ ಇದನ್ನು ರಾಜ್ಯಾದ್ಯಂತವೂ ಹರಡುವುದಕ್ಕೆ ಹೊರಟಿದ್ದಾರೆ. ಎಲ್ಲ ಜಿಲ್ಲೆಗಳಲ್ಲೂ ಇವರ ಪಕ್ಷದವರು ಇಂಥ ಒಂದೊರದು ವಸ್ತುಪ್ರದರ್ಶನವನ್ನು ನಡೆಸುವುದಕ್ಕೆ ಯಥೇಷ್ಟವಾಗಿ ಹಣವನ್ನು ವಿನಿಯೋಗಿಸುತ್ತಿದ್ದಾರೆ. ಈಗಾಗಲೆ ತುಮಕೂರು ದಾವಣಗೆರೆ ಈ ಸ್ಥಳಗಳಲ್ಲಿ ವಸ್ತು ಪ್ರದರ್ಶನಗಳನ್ನು ನಡೆಸಿದ್ದಾರೆ. ಅಲ್ಲಿ ಅಂದರೆ ದಾವಣಗೆರೆಯಲ್ಲಿ ಇವರು ಪೈಪೋಟಿ ಮೇಲೆ ನಡೆಸಿದ್ದಾರೆ. ಇವರು ಮಾಡಿರತಕ್ಕ ಖರ್ಚನ್ನೂ ಮತ್ತು ಅಲ್ಲಿ ಖಾಸಗೀ ಜನರು ಮಾಡಿರತಕ್ಕ ಖರ್ಚನ್ನೂ ಹೋಲಿಸಿದರೆ ಆಗ ಯಾರು ಎಷ್ಟೆಷ್ಟು ಹಣವನ್ನು ವಿತರಣೆಯಿಂದ ವೆಚ್ಚಮಾಡಿದ್ದಾರೆಂಬುದು ಸಭೆಗೆ ಗೊತ್ತಾಗುತ್ತದೆ. ಆ ಸಿದ್ದಗಂಗೆಯಲ್ಲೂ ಕೂಡ ಹಾಗೆ ಹಣವನ್ನು ದುಂದಾಗಿ ವೆಚ್ಚಮಾಡಿದ್ದಾರೆ. ಆದ್ದರಿಂದ ಸರ್ಕಾರದವರು ಇಲ್ಲಿಯವರೆಗಿಗೆ ಎಲ್ಲೆಲ್ಲಿ ಎಷ್ಟೆಷ್ಟು ಹಣವನ್ನು ಖರ್ಚುಮಾಡಿದ್ದಾರೆಂಬುದನು ಈ ಮಾನ್ಯ ಸಭೆಗೆ ತಿಳಿಸಲೇ ಬೇಕು. ಮೊದಲೇನೋ ಮದ್ರಾಸಿನಲ್ಲಿ ಮೊದಲು ಅವರು ಇದನ್ನು ಪ್ರಾರಂಭಮಾಡಿದರು ಆದರೆ ಆಲ್ಲಿ ಕಾಂಗ್ರೆಸ್ ಪಕ್ಷ ಬಿದ್ದುಹೋಯಿತು. ಆಗ ಅವರು ಇದನ್ನು ಅಲ್ಲಿ ನಿಲ್ಲಿಸಿದರು. ಈಗ ಆ ರತಕ್ಕ ಪಾರ್ಟಿಯವರು ಯಾರಿಗೂ ಅವಕಾಶ ಕೊಡುತ್ತಿಲ್ಲ. ಮೈಸೂರು ರಾಜ್ಯದಲ್ಲೂ ಹಾಗೇ ಮಾಡಬೇಕಾಗಿತ್ತು. ಆದರೆ ಹಾಗೆ ಮಾಡದೆ ಇಲ್ಲಿ ಹಣವನ್ನು ದುರಪಯೋಗ ಮಾಡುತ್ತಿದ್ದಾರೆ. ಆದ್ದರಿಂದ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್ :— ಮಾನ್ಯ ವಿರೋಧಪಕ್ಷದ ನಾಯಕರು ಈಗ ಬೆಂಗಳೂರು ನಗರದಲ್ಲಿ ನಡೆಸತಕ್ಕ ಎಗ್ಜಿಬಿಷನ್ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ.

ನಾನು ಇಲ್ಲಿಗೆ ಮುಖ್ಯಮಂತ್ರಿಯಾಗಿ ಬರುವುದಕ್ಕೂ ಮೊದಲೇ ಇದನ್ನು ಇಲ್ಲಿ ನಡೆಸುತ್ತಿದ್ದರು. ನಾನು ಬಂದ ನಂತರ ಇದನ್ನು ಇಲ್ಲಿ ಪೂಸದಾಗೇನೂ ಪ್ರಾರಂಭಮಾಡಿದ್ದಲ್ಲ. ಈ ಎಗ್ಜಿಬಿಷನ್ ಅನ್ನು ಬಹುಶ ; ೧೯೪೬ರಲ್ಲಿ ಶ್ರೀ ಭಾಷ್ಯಂರವರು ಪ್ರಾರಂಭಮಾಡಿದರೆಂಬುದಾಗಿ ನಾನು ವರ್ತಮಾನ ಕೇಳುತ್ತಿದ್ದೇನೆ. ಅಂದಿನಿಂದ ಇಂದಿನವರೆಗೂ ಇದು ನಡೆದುಕೊಂಡು ಬರುತ್ತಿದೆ. ಇದರಲ್ಲಿ ಹೊಸದೇನೂ ಇಲ್ಲ.

ಶ್ರೀ ಎಸ್. ಶಿವಪ್ಪ :—ಹಿಂದೆ ಇದನ್ನು ಹಣಸಂಪಾದನೆಗಾಗಿ ಮಾಡುತ್ತಿರಲಿಲ್ಲ. ಈಗ ಇದನ್ನು ಹಣಸಂಪಾದನೆಗಾಗೇ ಮಾಡಲಾಗುತ್ತಿದೆ.

ಶ್ರೀ ವೀರೇಂದ್ರ ಪಾಟೀಲ್ :— ಬಹುಶ : ನಮ್ಮ ವಿರೋಧ ಪಕ್ಷದ ನಾಯಕರು ಇಲ್ಲಿ ಎಷ್ಟು ದಿನಗಳಿಂದ ಇದ್ದಾರೋ ಅಷ್ಟೂ ದಿನಗಳಿಂದಲೂ ಈ ಎಗ್ಜಿಬಿಷನ್ನನ್ನು ಕಾಂಗ್ರೆಸ್ ಪಕ್ಷದವರು ನಡೆಸಿಕೊಂಡು ಬರುತ್ತಿದ್ದಾರೆ. ಇದು ಅವರಿಗೂ ಚೆನ್ನಾಗಿ ಗೊತ್ತಿದೆ. ಈ ದಿವಸ ಇದನ್ನು ಹೊಸದಾಗಿ ಯಾರೂ ಮಾಡುತ್ತಿಲ್ಲ. ನಾನು ಇತ್ತೀಚೆಗೆ ಹೋದ ಹೋದಲ್ಲೆಲ್ಲಾ ಬುದು ಹೆಚ್ಚಿನ ಜನಸಂಪರ್ಕಕ್ಕೆ ಅವಕಾಶವಿರಲಿ ಎಂಬ ಉದ್ದೇಶದಿಂದ ಎಲ್ಲೆಲ್ಲಿ ಈ ಎಗ್ಜಿಬಿಷನ್‌ಗಳನ್ನು ನಡೆಸಲಾಗುತ್ತದೋ ಅಂಥಲ್ಲಿಗೆ ಸಾಧ್ಯವಾದಮಟ್ಟಿಗೂ ಭಾಗವಹಿಸುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ. ಆದರೆ ಒಂದೇ ಸಮನಾಗಿ ಎಲ್ಲ ಕಡೆಗಳಲ್ಲೂ ಭಾಗವಹಿಸುವುದಕ್ಕಾಗುವುದಿಲ್ಲ. ಖಾಸಗೀವತಿಯವರಿಂದಲೂ ಇವುಗಳನ್ನು ನಡೆಸುವುದಕ್ಕೆ ನಾವು ಪ್ರೋತ್ಸಾಹ ಕೊಡಬೇಕು ಎನ್ನುವುದು ನಮ್ಮ ಉದ್ದೇಶ ಅದರಂತೆ ಬೆಳಗಾಂ ಗುಲ್ಬರ್ಗ ಈ ಜಾಗಗಳಲ್ಲಿ ಸರ್ಕಾರದ ವತಿಯಿಂದಲೂ ನಡೆಸಲಾಗಿದೆ. ಇತ್ತೀಚೆಗೆ ಜನರಲ್ಲೂ ಇವುಗಳ ಬಗ್ಗೆ ಹೆಚ್ಚು ಹೆಚ್ಚು ಉತ್ಸುಕತೆ ಉಂಟಾಗಿದೆ. ಹೆಚ್ಚು ಹೆಚ್ಚು ವಿಚಾರಗಳನ್ನು ತಿಳಿಯಲೂ ಜನರು ಹೈಚ್ಚಿನ ಕಾತರರಾಗಿದ್ದಾರೆ.

ಶ್ರೀ ಸಿ. ಕೆ. ರಾಜಯ್ಯಸೆಟ್ಟಿ :— ಹಿಂದೆ ಶ್ರೀ ದಯಾನಂದಸಾಗರ್ ಅವರು ನಡೆಸಿದ ವಸ್ತು ಪ್ರದರ್ಶನಕ್ಕೆ ಸರ್ಕಾರದಿಂದ ಏನು ಪ್ರೋತ್ಸಾಹ ನೀಡಲಾಯಿತು?

ಶ್ರೀ ವೀರೇಂದ್ರ ಪಾಟೀಲ್ :— ಇಷ್ಟು ಮಾತ್ರ ತಿಳಿದುಕೊಳ್ಳಬೇಕು, ತಾವು ಈ ರೀತಿ ಸೈಡ್-ಟ್ರಾಕ್ ಮಾಡುವುದಕ್ಕೆ ಹೋಗಬೇಡಿ. ನಮಗೆ ಯಾವ ಎಕ್ಸಿಬಿಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ ಅಂತಹ ಎಕ್ಸಿಬಿಷನ್‌ನಲ್ಲಿ ಪಾರ್ಟಿಸಿಪೇಟ್ ಮಾಡುತ್ತೇವೆ, ಮಾಡುತ್ತಾ ಇದ್ದೇವೆ, ಇನ್ನು ಮುಂದೆಯೂ ಮಾಡುತ್ತೇವೆ.

ಶ್ರೀ ಡಿ. ದೇವರಾಜ ಅರಸ್ :— ಎಲ್ಲಿ ಪಾರ್ಟಿಸಿಪೇಟ್ ಮಾಡಬೇಕೋ ಮಾಡುತ್ತೇವೆ, ಇಷ್ಟ ಇದ್ದರೆ ಮಾಡುತ್ತೇವೆ ಇಲ್ಲದೇ ಇದ್ದರೆ ಮಾಡುವುದಿಲ್ಲ ಅಂತ ಅನ್ನುವುದು ಸರಿ ಹೋಗುವುದಿಲ್ಲ. ಈ ವಿಚಾರದಲ್ಲಿ ಸರ್ಕಾರದ ನೀತಿ ಏನಾದರೂ ಹಾಕಿದ್ದೀರಾ ? ಇಂಡಿವಿಜ್ಯುಯಲ್ಸ್‌ಗೆ ಕೊಡುತ್ತೇವೆ, ಪೊಲಿಟಿಕಲ್ ಪಾರ್ಟೀಸ್‌ಗೆ ಕೊಡುತ್ತೇವೆ, ಪ್ರೈವೇಟ್ ಇನ್‌ಸ್ಟಿಟ್ಯೂಷನ್ಸ್‌ಗೆ ಕೊಡುತ್ತೇವೆ ಅಂತ ಅನ್ನುವುದರಲ್ಲಿ ಯಾವುದಾದರೂ ನೀತಿ ಅನುಸರಿಸಿ ಮಾಡುತ್ತಾ ಇದ್ದೀರಾ? ನಮಗೆ ಇಷ್ಟ ಬಂದಕಡೆ ಪಾರ್ಟಿಸಿಪೇಟ್ ಮಾಡುತ್ತೇವೆ ಇಲ್ಲದೇ ಇದ್ದರೆ ಇಲ್ಲ ಅಂತ ಹೇಳುವುದು ಸರ್ಕಾರದ ನೀತಿ ಆಗುವುದಿಲ್ಲ, ಇಂಡಿವಿಜ್ಯುಯಲ್ ಧೋರಣೆ ಆಗುತ್ತದೆ.

ಶ್ರೀ ವೀರೇಂದ್ರ ಪಾಟೀಲ್ :— ನಾನು ಹೇಳಿದ್ದೇನೆಂದರೆ ಎಕ್ಸಿಬಿಷನ್‌ಗಳಲ್ಲಿ ಭಾಗವಹಿಸಬೇಕು ಅನ್ನುವಂತಹ ನೀತಿ, ಆದರೆ ಎಲ್ಲಕಡೆಯೂ ಒಂದೇ ಮಟ್ಟದಲ್ಲಿ ಭಾಗವಹಿಸುವುದಕ್ಕೆ ಸಾಧ್ಯವಿಲ್ಲ ಜಿಲ್ಲಾ ಮಟ್ಟದ ಎಕ್ಸಿಬಿಷನ್ ಕೆಲವು ಆಗುತ್ತವೆ. ತಾಲ್ಲೂಕು ಮಟ್ಟದ ಎಕ್ಸಿಬಿಷನ್ ಕೆಲವು ಆಗುತ್ತವೆ, ರಾಜ್ಯ ಮಟ್ಟದಲ್ಲಿ ಎಂದರೆ ಬೆಂಗಳೂರಿನಲ್ಲಿ ಎಕ್ಸಿಬಿಷನ್ ಆಗುತ್ತದೆ, ಇವುಗಳಲ್ಲಿ ನಮ್ಮ ಶಕ್ತ್ಯಾನುಸಾರ ಭಾಗವಹಿಸುತ್ತೇವೆ. ಯಾರು ಎಕ್ಸಿಬಿಷನ್ ಆರ್ಗನೈಸ್ ಮಾಡುತ್ತಾರೆ, ಎಷ್ಟು ದೊಡ್ಡ ಪ್ರಮಾಣದಲ್ಲಿ ಆಗುತ್ತದೆ, ಅದರ ಮಹತ್ವ ಏನು ಎಂಬುದನ್ನು ನೋಡಿಕೊಂಡು ಭಾಗವಹಿಸಬೇಕೆಂಬ ನೀತಿ ಸರ್ಕಾರ ಅನೇಕ ವರ್ಷಗಳಿಂದ ಅನುಸರಿಸಿಕೊಂಡು ಬರುತ್ತಾ ಇದೆ, ಇದು ಹೊಸ ನೀತಿಯೇನೂ ಅಲ್ಲ.

ಶ್ರೀ ಡಿ. ದೇವರಾಜ ಅರಸ್ :— ದಾವಣಗೆರೆಯಲ್ಲಿ ಮುನಿಸಿಪಾಲಿಟಿಯವರು ಮಾಡಬೇಕು ಎಂದು ಹೇಳಿದಾಗ ಯಾವ ರೀತಿ ಪಾರ್ಟಿಸಿಪೇಟ್ ಮಾಡಿದಿರಿ ?

ಶ್ರೀ ವೀರೇಂದ್ರಪಾಟೀಲ್ :— ಅಲ್ಲೂ ಮಾಡಿದ್ದೇವೆ.

† ಶ್ರೀ ಡಿ.ದೇವರಾಜ ಅರಸ್ :— ಇಲ್ಲ ಅಂತ ನನ್ನ ವರ್ತಮಾನ. ಸಿದ್ದಗಂಗೆಯಲ್ಲಿ ಪಾರ್ಟಿಸಿಪೇಟ್ ಮಾಡುತ್ತಾ ಇದ್ದೀರಿ. ನಿಮಗೆ ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ನಿಮ್ಮ ನೀತಿ ಒಂದೇ ರೀತಿಯಾಗಿ ಇರಲಿ, ಎಲ್ಲರನ್ನೂ ಒಂದೇ ದೃಷ್ಟಿಯಿಂದ ನೋಡಬೇಕು. ಮುನಿಸಿಪಾಲಿಟಿಯವರು ಮಾಡಿದರೆ ಬೇಡ ಅಂತ ಅನ್ನುವುದು, ಸಿದ್ದಗಂಗೆ ಮಠದವರು ಮಾಡಿದರೆ ಬೇಕು ಅನ್ನುವುದು. ನಿಮಗೆ ಯಾರ ಮೇಲೆ ಪ್ರೇಮ, ಅಭಿಮಾನ ಬರುತ್ತದೆಯೋ ಅವರಿಗೆ ಕೊಡುತ್ತೇವೆ ಅಂತ ಅನ್ನುವುದು ಇದು ಸರಿಯಲ್ಲ ಎಂದು ಹೇಳುತ್ತೇನೆ. ಅಂಥವರಿಗೆ ಕೊಡಿ, ಇಂಥವರಿಗೆ ಕೊಡಿ ಎಂದು ನಾನು ಹೇಳುವುದಿಲ್ಲ. ನಿಮ್ಮ ಡಿಸ್ಪೋಷನ್‌ನಲ್ಲಿ ನಿಮಗೆ ಇಷ್ಟಬಂದ ಕಡೆ ಪಾರ್ಟಿಸಿಪೇಟ್ ಮಾಡುತೇವೆ ಅಂತ ಅನ್ನುವುದರಲ್ಲಿ ಏನು ಅರ್ಥವಿದೆ ? ಈ ಎಕ್ಸಿಬಿಷನ್‌ನಲ್ಲಿ ಸರ್ಕಾರದ ಕಾರ್ಖಾನೆಗಳು ಮತ್ತು ಇತರ ಇಲಾಖೆಯವರು ಪಾರ್ಟಿಸಿಪೇಟ್ ಮಾಡುವುದರಿಂದ ದೇಶದ ಜನತೆಗೆ ಮತ್ತು ಸಂಸ್ಥೆಗೆ ಲಾಭವಾಗುತ್ತದೆ ನಿಜ. ಇದರ ಜೊತೆಗೆ ಯಾರು ಎಕ್ಸಿಬಿಷನ್ ನಡೆಸುತ್ತಾರೋ ಅವರಿಗೂ ಕೂಡ ಸ್ವಲ್ಪ ಫಾಯ್ದೆಯಾಗುತ್ತದೆ. ಏಕೆಂದರೆ ಗ್ರಾಂಡ್ ರೆಂಟ್ ಹಾಕುತ್ತಾರೆ ಪ್ರತಿಯೊಂದು ಇಲಾಖೆಯವರೂ ಪಾರ್ಟಿಸಿಪೇಟ್ ಮಾಡಿದರೆ ಸಾವಿರಾರು ರೂಪಾಯಿ ಅದರಿಂದ ಬರುತ್ತದೆ. ಆದ್ದರಿಂದ ತಮ್ಮ ಧೋರಣೆ ಈ ವಿಚಾರದಲ್ಲಿ ಸಾರ್ವತ್ರಿಕವಾಗಿ ಗೊತ್ತಾಗುವ ರೀತಿಯಲ್ಲಿ ಇರಲಿ ಎಂಬುದು ನನ್ನ ಅಭಿಪ್ರಾಯ.

† ಶ್ರೀ ಎಚ್. ಸಿದ್ದವೀರಪ್ಪ :— ದಾವಣಗೆರೆಯಲ್ಲಿ ಒಂದು ಎಕ್ಸಿಬಿಷನ್ ಮುನಿಸಿಪಾಲಿಟಿಯವರು ಮಾಡಿದರು, ಆಗ ಅದಕ್ಕೆ ಸರ್ಕಾರದಿಂದ ಎಷ್ಟು ನೆರವು ಕೊಟ್ಟಿದ್ದೀರಾ? ಕಾಂಗ್ರೆಸ್ ಎಕ್ಸಿಬಿಷನ್ ಮಾಡಿದಿರಿ ಆಗ ಎಷ್ಟು ನೆರವು ಕೊಟ್ಟಿದ್ದೀರಾ ? ಎಷ್ಟು ದುಡ್ಡು ಖರ್ಚಾಗಿದೆ ? ಏಕೆ ಹೇಳುತ್ತೇನೆ ಎಂದರೆ ಇದುವರೆಗೂ

(ಶ್ರೀ ಎಚ್. ಸಿದ್ದವೀರಪ್ಪ)

ನಮ್ಮ ರಾಜ್ಯದಲ್ಲಿ ರಾಷ್ಟ್ರೀಯವಾದ ನಾಡಹಬ್ಬದಲ್ಲಿ ಮೈಸೂರಿನ ಒಂದು ಎಕ್ಸಿಬಿಷನ್ ಅನೇಕ ವರ್ಷಗಳಿಂದ ನಡೆದುಕೊಂಡು ಬರುತ್ತಾ ಇದೆ. ಬೆಂಗಳೂರಿನಲ್ಲಿ ಇನ್ನೊಂದು ನಡೆಯುತ್ತಾ ಇತ್ತು. ಈಗ ಡಿಸ್ಟ್ರಿಕ್ಟ್‌ಗೂ ಕೂಡ ಅದು ವ್ಯಾಪಿಸಿದೆ, ಇದರ ಮಧ್ಯೆ ತಾಲ್ಲೂಕಿನಲ್ಲೂ ಕೂಡ ಮಾಡಬೇಕೆಂದು ಹೇಳುತ್ತಾ ಇದ್ದಾರೆ. ಇದು ಏನಾಗಿದೆ ಎಂದರೆ ಒಂದು ರೀತಿಯ ಫೇವರಿಟಿಸಂ ಹಾಗೆ ಅನೇಕ ಕಡೆ ದುಡ್ಡು ಮಾಡಿಕೊಳ್ಳಲಿಕ್ಕೆ ಸರ್ಕಾರದ ಖರ್ಚಿನಲ್ಲಿ ಬಹಳ ಅನುಕೂಲವಾಗಿದೆ ಎಂಬುದು ಜನಜನಿತವಾಗಿದೆ. ಶ್ರೀ ಮಾನ್ ದೇವರಾಜ ಅರಸ್‌ರವರು ಹೇಳಿದ ಹಾಗೆ ಒಂದು ಗೌರ್ನ್‌ಮೆಂಟ್ ಆರ್ಡರ್ ಹೊರಡಿಸಿ ಹೀಗೆ ಮಾಡುತ್ತೇವೆ ಅಂತ ಹೇಳುವುದನ್ನು ಬಿಟ್ಟು ಫೇವರಿಟಿಸಂ ತೋರಿಸಲಿಕ್ಕೆ ಸರ್ಕಾರದ ದುಡ್ಡು ಖರ್ಚು ಮಾಡುವುದು ಒಳ್ಳೆಯದಲ್ಲ ದಾವಣಗೆರೆಯಲ್ಲಿ ಕಾಂಗ್ರೆಸ್ ಎಕ್ಸಿಬಿಷನ್ ಮಾಡಿದರು ಸರ್ಕಾರಿ ಇಲಾಖೆಗಳಿಗೆ ಲಕ್ಷಾಂತರ ರೂಪಾಯಿ ಖರ್ಚಾಗಿದೆ, ಪ್ರೋಲಾಗಿದೆ ಎಂದು ನಾನು ಹೇಳುವುದಿಲ್ಲ. ಮುನಿಸಿಪಾಲಿಟಿಯವರು ಮಾಡಿದಾಗ ಅವರಿಗೆ ಆದ ಲುಕ್ಸಾನು ಸುಧಾರಿಸಿಕೊಳ್ಳುವುದಕ್ಕೆ ಕಷ್ಟವಾಗಿದೆ. ಈ ರೀತಿ ಕೆಲವರಿಗೆ ಸಹಕಾರ ಕೊಡುವುದು ಇನ್ನು ಕೆಲವರಿಗೆ ಸಹಕಾರ ಕೊಡದೇ ಇರುವುದು ಈ ರೀತಿ ಮಾಡುವುದು ಸರಿಯಲ್ಲ. ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಸ್ವಂತ ಪಕ್ಷಕ್ಕೆ ಸಾರ್ವಜನಿಕ ಹಣವನ್ನು ಉಪಯೋಗ ಮಾಡಲಿಕ್ಕೆ ಅವಕಾಶ ಮಾಡಿ ಕೊಡುತ್ತಾ ಇದ್ದೀರಿ, ಈ ನೀತಿ ಒಳ್ಳೆಯದಲ್ಲ ಎಂಬುದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಬೇಕಾಗಿದೆ.

ಶ್ರೀ ಎಸ್. ಶಿವಪ್ಪ :— ಇದು ಆರಂಭವಾದದ್ದು ಮದ್ರಾಸಿನಲ್ಲಿ. ಇತ್ತೀಚೆಗೆ ರಾಜಕೀಯ ಪಕ್ಷಗಳು ಅವರು ಯಾರೇ ಆಗಲಿ ಎಗ್ಸಿಬಿಷನ್ ಮಾಡಿದರೆ ಸರ್ಕಾರದ ಮತಿಯಿಂದ ಸಹಾಯ ಕೊಡಬಾರದು, ಪಕ್ಷಕ್ಕೆ ಸಹಾಯ ಮಾಡಿದ ಹಾಗಾಗುತ್ತದೆ ಅಂತ ಆದೇಶ ರವ್ಯ ಮಾಡಿದ್ದಾರೆ. ಮೈಸೂರು ಸರ್ಕಾರ ಅದಕ್ಕೆ ತದ್ವಿರುದ್ಧವಾಗಿ ಕಾಂಗ್ರೆಸ್ ಪಾರ್ಟಿಯವರು ಏರ್ಪಡಿಸತಕ್ಕ ಎಕ್ಸಿಬಿಷನ್‌ಗೆ ಸರ್ಕಾರದ ಇಲಾಖೆಗಳ ಪ್ರದರ್ಶನ ಮಾಡಿ ದುಡ್ಡು ಕೊಡುವುದಕ್ಕೆ ಯೋಚನೆ ಮಾಡಿದ್ದಾರೆ. ಬೆಂಗಳೂರಿನ ಸುಭಾಷ್‌ನಗರದಲ್ಲಿ ಆಗುವ ಎಕ್ಸಿಬಿಷನ್‌ನಲ್ಲಿ ಅರಣ್ಯ ಇಲಾಖೆ, ಪಿಡಬ್ಲ್ಯೂಡಿಯ ಒಂದೊಂದು ಸ್ಟಾಲ್‌ಗೆ ಹತ್ತಾರು ಸಾವಿರ ರೂಪಾಯಿ ಕೊಡುತ್ತಾ ಇದ್ದಾರೆ. ಹೋದ ಸಾರಿ ೫ ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಭಾಷ್ಯಂರವರ ಕಾಲ ಹೇಳಿದರು. ಈಗ ಅದು ವ್ಯಾಪಾರ ಸಂಸ್ಥೆಯಾಗಿದೆ. ವಸ್ತು ಪ್ರದರ್ಶನ ಮಾಡತಕ್ಕೆ ವಸ್ತುಪ್ರದರ್ಶನ ಅಲ್ಲ. ಹಣ ಸಂಪಾದನೆ ಮಾಡಬೇಕೆಂಬದೃಷ್ಟಿಯಿಂದ ಮಾಡುತ್ತಾ ಇದ್ದಾರೆ.
ಎರಡು ವರ್ಷಗಳಿಂದ ಎಷ್ಟು ಹಣ ಕೊಟ್ಟಿದಾ ರೆಂಬುದನ್ನು ಹೇಳಲಿ, ಒಂದಕ್ಕೆ ಎರಡರಷ್ಟು ಕೊಡಲಾಗಿದೆ. ಏಕೆ ಸರಕಾರದಿಂದ ಹೆಚ್ಚು ಹಣ ಕೊಡುವುದು? ಇದೇ ರೀತಿಯಲ್ಲಿ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ ಮಾಡುವುದಕ್ಕೆ ಕೊಡಲಾಗುತ್ತಿದೆಯೇ? ದಾವಣಗೆರೆಯಲ್ಲಿ ಪುರಸಭೆಯವರು ವಸ್ತುಪ್ರದರ್ಶನ ನಡೆಸಿದಾಗ ಕೊಟ್ಟಿರುವುದೆಷ್ಟು? ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಕೊಟ್ಟಿರುವ ಹಣ ತಿಳಿಸಿದರೆ ಸಾಕಲು ಹಾಗೆಯೇ ಪುರಸಭೆಗಳು, ಸಾರ್ವಜನಿಕ ಸಂಸ್ಥೆ ಮುಂತಾದುವ ...ರ್ಯಾ...ನ ವಸ್ತು ಪ್ರದರ್ಶನಗಳಿಗೆ ನೀವು ಕೊಟ್ಟಿರುವುದೆಷ್ಟು ಎಂಬುದನ್ನು ದಯವಿಟ್ಟು ಹೇಳಿ.

10-30 A. M

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ :— ಸರಕಾರಕ್ಕೆ ಸೇರಿರುವ ಜಮೀನನ್ನು ವಸ್ತುಪ್ರದರ್ಶನಕ್ಕಾಗಿ ಮೂರುಸಾವಿರ ರೂಪಾಯಿಗೆ ಕೊಡುವುದು ಮತ್ತು ನಾಲ್ಕಾರು ಲಕ್ಷ ರೂಪಾಯಿ ಹಣ ಸಹಾಯ ಮಾಡುವುದು. ಇನ್ನೊಂದು ಕಡೆ ಹಾಗೆ ಮಾಡದೆ ಇರುವುದರಲ್ಲಿ. ಆರ್ಥವೇನು?

ಶ್ರೀ ವೀರೇಂದ್ರ ಪಾಟೀಲ್ :— ಈಗ ಮಾನ್ಯ ಸದಸ್ಯರು ದಾವಣಗೆರೆಯ ಮುನಿಸಿಪಾಲಿಟಿಯವರು ನಡೆಸಿದ ವಸ್ತು ಪ್ರದರ್ಶನದಲ್ಲಿ ಸರಕಾರ ಭಾಗ ವಹಿಸಿಲ್ಲ ಎಂದು ಹೇಳಿದರು. ವಸ್ತುಪ್ರದರ್ಶನ ನಡೆಸಿದರೆ ಸರಕಾರ ಭಾಗವಹಿಸ ಬೇಕೆಂಬುದೆನೋ ಸರಿಯೇ. ಆದರೆ ಇತ್ತೀಚೆಗೆ ಹೆಚ್ಚಿನ ಪ್ರಮಾಣದಲ್ಲಿ ವಸ್ತುಪ್ರದರ್ಶನಗಳನ್ನು ನಡೆಸಲು ಜನರು ಮುಂದೆ ಬರುತ್ತಿದ್ದಾರೆ. ಹೀಗಿರುವಾಗ ಯಾವ ರೀತಿನೀತಿ ಅನುಸರಿಸಲಾಗುವುದು ಎಂದು ಸದಸ್ಯರು ಕೇಳಿದ್ದಾರೆ ಈಗಾಗಲೆ ಭಾಗ ವಹಿಸುತ್ತಿದ್ದೇವೆ. ಯಾವ ಪ್ರಮಾಣದಲ್ಲಿ ಮುಂದೆ ಭಾಗ ವಹಿಸಬೇಕು, ಒಂದೇ ಸಲ ಭಾಗವಹಿಸುವುದಕ್ಕೆ ಶಕ್ತಿ ನಮಗಿದೆಯೇ ಎಂಬುದನ್ನು ವಿಚಾರ ಮಾಡಬೇಕು. ಗೌರ್ನಮೆಂಟ್ ರೆಂಟ್ ವಿಚಾರ ದೊಡ್ಡದೇನೂ ಅಲ್ಲ. ಒಂದೇ ಕಡೆ ನಾಲ್ಕೈದು ಪ್ರದರ್ಶನಗಳಾದರೆ ಎಲ್ಲಾ ಕಡೆಯೂ ಭಾಗವಹಿಸುವುದಕ್ಕಾಗುವುದಿಲ್ಲ. ಒಂದು ಅಡ್ವರ್ಟೈಸಿಂಗ್ ಇದ್ದರೆ ಭಾಗವಹಿಸಬಹುದು. ನಮ್ಮಲ್ಲಿ ಹೆಚ್ಚು ಮಾಡಲ್ಸ್ ಇರುವುದಿಲ್ಲ, ಅನುಕೂಲತೆಗಳಿವುದಿಲ್ಲ,

ಪ್ರತಿಯೊಂದು ಕಡೆಯೂ ಲೋಕೋಪಯೋಗಿ ಇಲಾಖೆ ವಿಚಾರ ಪ್ರದರ್ಶಿಸಬೇಕೆಂದರೆ ಮಾಡಲ್ಸ್ ಇಟ್ಟು ತೋರಿಸಬೇಕು ಹಾರಂಗಿ ಯೋಜನೆ, ಹೇಮಾವತಿ ಯೋಜನೆ ಮುಂತಾದುವುಗಳನ್ನು ತೋರಿಸಲು ಮಾಡಲ್ ಇರಬೇಕು. ನಮ್ಮಲ್ಲಿ ಒಂದೆರಡು ಮಾಡಲ್ಸ್ ಮಾತ್ರ ಇರುವುವು, ಆದ್ದರಿಂದ ಎಲ್ಲಾ ಕಡೆಯೂ ಭಾಗವಹಿಸಲು ಸಾಧ್ಯವಾಗದಿರಬಹುದು. ತನ್ನ ಶಕ್ತಿಗನುಸಾರವಾಗಿ ಭಾಗವಹಿಸಬೇಕು ಎಂಬುದು ಸರಕಾರದ ಉದ್ದೇಶ. ಎಷ್ಟು ಕೊಟ್ಟಿರಿ ಎಂದು ಕೇಳುವರು, ತಪಶೀಲಿಲ್ಲ, ಬೇಕಾದರೆ ಪ್ರಶ್ನೆ ಹಾಕಿದರೆ ಉತ್ತರ ಕೊಡುತ್ತೇನೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ :— ನಾನು ಪ್ರಶ್ನೆ ಕಳಿಸಿದ್ದರೂ ಜವಾಬು ಕೊಟ್ಟಿಲ್ಲ.

ಶ್ರೀ ಎಸ್. ಶಿವಪ್ಪ :— ಕಾಂಗ್ರೆಸ್ ವಸ್ತುಪ್ರದರ್ಶನಕ್ಕೆ ಹೆಚ್ಚು ಸಹಾಯಮಾಡಿ, ಸರಕಾರಿ ಇಲಾಖೆಗಳು ಅದರಲ್ಲಿ ಭಾಗವಹಿಸಿ ಪ್ರದರ್ಶನ ನಡೆಸಿ ಕಾಂಗ್ರೆಸ್ಸೇತರ ವಸ್ತುಪ್ರದರ್ಶನಗಳಲ್ಲಿ ಸರಕಾರ ಅಷ್ಟೇರೀತಿ ಮಾಡಿದ್ದರೆ, ಎರಡೂ ಒಂದೇ ಭಾವನೆ ಬರುವಂತೆ ಮಾಡಿದ್ದರೆ ಜನರಲ್ಲಿ ಏನು ಭಾವನೆ ಬರುವುದು? ಅದೇ ಮದ್ರಾಸು ಸರಕಾರ ರಾಜಕೀಯ ಪ್ರದರ್ಶನಗಳಲ್ಲಿ ಸರಕಾರ ನೇರವಾಗಿ ಭಾಗವಹಿಸಿಲ್ಲ. ಪಕ್ಷ ಮತ್ತು ಸರಕಾರ ಎರಡೂ ಒಂದೇ ಭಾವನೆ ಒರಬಾರದು ಎಂಬುದು ಅದರ ಉದ್ದೇಶ. ಅದಕ್ಕೆ ಅಲ್ಲಿ ಸರಕಾರ ಭಾಗವಹಿಸುತ್ತಿಲ್ಲ.

ಶ್ರೀ ವೀರೇಂದ್ರ ಪಾಟೀಲ್ :— ೧೯೪೬ ರಿಂದ ಕಾಂಗ್ರೆಸ್ ವಸ್ತು ಪ್ರದರ್ಶನದಲ್ಲಿ ಭಾಗವಹಿಸುತ್ತಿದ್ದೇವೆ, ನಾನು ಬಂದಮೇಲೆ ಈ ಕೆಲಸ ಮಾಡಿಲ್ಲ. ಸುಮಾರು ೨೫ ವರ್ಷಗಳಿಂದ ಕಾಂಗ್ರೆಸ್ ವಸ್ತುಪ್ರದರ್ಶನ ನಡೆಯುತ್ತಿದೆ. ಡಿ. ಎಂ. ಕೆ. ಭಾಗವಹಿಸದಿರಬಹುದು. ಅದು ಅವರ ನೀತಿ ಇರಬಹುದು. ಅದು ನಮ್ಮ ನೀತಿಯಲ್ಲ, ಇಂದು ಹೊಸ ನೀತಿ ಅನುಸರಿಸುತ್ತಿಲ್ಲ. ೧೯೪೬ ರಿಂದ ಕಾಂಗ್ರೆಸ್ ವಸ್ತು ಪ್ರದರ್ಶನ ನಡೆಯುತ್ತಿದೆ. ಬಹುಶಃ ೧೯೭೨ರ ನಂತರ ಶಿವಪ್ಪನವರ ಸರಕಾರಬಂದಾಗ ಅವರು ಕೈ ಬಿಡಬಹುದು. ಈಗ ಭಾಗವಹಿಸುವುದಿಲ್ಲ ಎಂದು ಹೇಳುವಹಾಗಿಲ್ಲ. ಇಂದು ಹೊಸ ನೀತಿಯನ್ನನು ಸರಿಸುವುದಕ್ಕಾಗುವುದಿಲ್ಲ, ಹಿಂದಿನವರು, ೧೯೪೬ ರಿಂದ ಅನುಸರಿಸಿರುವ ನೀತಿಯನ್ನೇ ನಾವೂ ಅನುಸರಿಸುತ್ತಿದ್ದೇವೆ.

Mr. SPEAKER :— In view of the reply by the Hon'. Chief Minister, I witheld my consent to the adjournment motion.

Mysore Cattle Licensing (Amendment) Bill, 1970 Introduction

Mr. SPEAKER :— I have a request to make to the Hon. members. There is a small Bill--the Mysore Cattle Licensing (Amendment) Bill, 1970. We have to pass it and send it to the Council. I suggest that it may be taken up now.

SRI H. SIDDAVEERAPPA :— Sir, we do not know which is small and which is big, because the Bill, is not with us. I do not like this kind of hustling through.

Mr. SPEAKER :— In fact, I was opposed to it. Hon. members Sriyuths T. R. Shamanna and Thimmaiah came to me and representhed that a large number of cattle is involved and threfore it should be passed.

SRI H. SIDDAVEERAPPA :— They might have probably asked for an executive order. We did not know whether you would bring in a Bill for this purpose.

MR. SPEAKER ;— In the Hon. Minister will introduce it now.

SRI B. M. PATIL ; – (Minister of State for Municipal Administraion) :- Sir, I beg to introduce the Mysore Cattle Licensing (Amendment) Bill, 1970, under rule 64 of the Rules of Procedure and Conduct of Business in the Mysore Legislative Assembly.

MR. SPAKER :— The Bill is introduced *Motion Consider*.

SRI B. M. PATIL :— Sir, I beg to move :—

"That the Mysore Cattle Licensing (Amendment) Bill, 1970 be taken into consideration."

MR. SPEAKER:— I shall put this to the Vote of the House. The question is :

" That the Mysore Cattle Licensing (Amendment) Bill, 1970 be taken into consideration."

The motion was adopted

CLAUSES

MR. SPEAKER:— Since there are no amendments, I will now put the clauses to the vote of the House. The question is :

" That clause 2 do stand part of the Bill."

The motion was adopted

Clause 2 was added to the Bill.

MR. SPEAKER:— The question is :

" That clause 1, the long Title and to the Eracting Formula do stand part of the Bill."

The motion was adopted

Clause 1, long Title and to the Eracting Formula were added to the Bill.

Motion to pass

SRI B. M. PATIL:— Sir, I beg to move :

" That the Mysore Cattle Licensing (Amendment) Bill, 1970 be passed."

MR. SPEAKER:— The question is :

" That the Mysore Cattle Licensing (Amendment) Bill, 1970 be passed."

The motion was adopted

PAPERS LAID ON THE TABLE

MR. SECRETARY:— I beg to lay on the Table of the House :

" The Second and the Third Lists of Unstarred Questions and Answers."

UNSTARRED QUESTIONS AND ANSWERS

Second List

PRIVATE BUSES OPERATING IN BANGALORE DISTRICT

21. SRI C. R. RANGE GOWDA (Magadi):—

Will the Minister for Transport be pleased to state:—

(*a*) the number of routes wherein the private buses are operating in Bangalore District and the persons who are operating ;

(*b*) the number of persons who have applied at different levees of Transport Authorities for transfer of permits for the last one year up to-date ?

SRI MOHAMED ALI (Minister for Transport):—

(*a*) 187 routes are operated by private buses in Bangalore District and these routes are operated by 137 persons as in the enclosed list.

(*b*) Six persons have applied for transfer of permits in respect of routes operated in Bangalore District.